# “ವೈಜ್ಞಾನಿಕ ಚಿಂತನಾ ಕಾರ್ಯಕ್ರಮ”

ದಿನಾಂಕ: 29.01.2024 ರಂದು **ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ,** ಬಾಗಲಕೋಟೆ ಹಾಗೂ **ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ, ಹಿರೇಪಡಸಲಗಿ ತಾ॥ ಜಮಖಂಡಿ** ಇವರ ಸಂಯುಕ್ತ ಆಶ್ರಯದಲ್ಲಿ **“ವೈಜ್ಞಾನಿಕ ಚಿಂತನಾ ಕಾರ್ಯಕ್ರಮ”** ವನ್ನು ಆಯೋಜಿಸಲಾಯಿತು, ಈ ಕಾರ್ಯಕ್ರಮದಲ್ಲಿ **ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ, ಹಿರೇಪಡಸಲಗಿ** ತಾ॥ ಜಮಖಂಡಿ ಜಿ: ಬಾಗಲಕೋಟೆಯ **ಒಟ್ಟು** 72 ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಭಾಗವಹಿಸಿದ್ದರು.

ಕಾರ್ಯಕ್ರಮದ ಉದ್ಘಾಟಕರಾಗಿ ಆಗಮಿಸಿದ್ದ **ಡಾ. ಟಿ.ಬಿ.ಅಳ್ಳೊಳ್ಳಿ,** ಕುಲಸಚಿವರು ತೋ.ವಿ.ವಿ ಹಾಗೂ ಸದಸ್ಯ ಕಾರ್ಯದರ್ಶಿಗಳು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಬಾಗಲಕೋಟೆ ಹಾಗೂ ಇತರ ಗಣ್ಯರು **ಸಸಿಗೆ ನೀರುಣಿಸುವ** ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಮುಂದುವರೆದು, ಉದ್ಘಾಟಕರ ಭಾಷಣ ಮಾಡಿದ **ಡಾ. ಟಿ.ಬಿ.ಅಳ್ಳೊಳ್ಳಿ,** ಕುಲಸಚಿವರು ತೋ.ವಿ.ವಿ ಹಾಗೂ ಸದಸ್ಯ ಕಾರ್ಯದರ್ಶಿಗಳು ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಬಾಗಲಕೋಟೆ ರವರು, ವಿದ್ಯಾರ್ಥಿಗಳು ಮೌಢ್ಯತೆ ಹಾಗೂ ಅಂದಶ್ರದ್ಧೆಗಳಿಗೆ ದಾಸರಾಗದೆ ವೈಜ್ಞಾನಿಕ ಚಿಂತನೆಗಳ ಮೂಲಕ ಉತ್ತಮ ಜೀವನವನ್ನು ರೂಪಿಸಿಕೊಳ್ಳುವಂತೆ ತಿಳಿಹೇಳಿದರು.ಅದರಂತೆ, ವಚನ ಸಾಹಿತ್ಯದ ಮೂಲಕ ಶರಣರು ವಿವರಿಸಿರುವ ಕೆಲ ಮೌಢ್ಯ ಆಚರಣೆಗಳನ್ನು ಹೋಗಲಾಡಿಸುವ ಬಗ್ಗೆಯೂ ವಿದ್ಯಾರ್ಥಿಗಳಿಗೆ ತಿಳಿಸಿದರು.

ಅದರಂತೆ, ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದಂತಹ **ಶ್ರೀಮತಿ ರೂಪಾ ವಿ.ಕೆ,** ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಬಾಗಲಕೋಟೆ ರವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ, ಅರಣ್ಯ ಮತ್ತು ಪರಿಸರಕ್ಕೆ ಸಂಬಂಧಿಸಿದ ಕೆಲ ಮೌಢ್ಯ ಆಚರಣೆಗಳನ್ನು ತಿಳಿಸುತ್ತ, ಆಯಾ ಮೌಢ್ಯ ಆಚರಣೆಗಳಿಂದ ಧೂರವಿರುವಂತೆ ಹಾಗೂ ಗಿಡಮರಗಳನ್ನು ನೆಡುವುದರ ಮೂಲಕ ಪರಿಸರವನ್ನು ಬೆಳೆಸುವಂತೆ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ತದನಂತರ, ಕಾರ್ಯಕ್ರಮದ ಅತಿಥಿಗಳಾಗಿ ಆಗಮಿಸಿದಂತಹ **ಶ್ರೀ ಪಿ.ಸಿ.ಕಲ್ಯಾಣಿ,** ಸಹ ಶಿಕ್ಷಕರು, ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ, ಹಿರೇಪಡಸಲಗಿ ರವರು ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಮನೋಬಲವನ್ನು ಬೆಳೆಸಿಕೊಳ್ಳಲು ಈ ತರಹದ ವೈಜ್ಞಾನಿಕ ಕಾರ್ಯಕ್ರಮಗಳಲ್ಲಿ ಹೆಚ್ಚಾಗಿ ಭಾಗವಹಿಸುವಂತೆ ಕರೆನೀಡಿದರು ಹಾಗೂ ಸಾಮಾಜಿಕ ಬೆಳವಣಿಗೆಯೊಂದಿಗೆ ವೈಜ್ಞಾನಿಕ ವೆಳವಣಿಗೆಗೂ ಕೂಡ ಹೆಚ್ಚಿನ ಮಹತ್ವವನ್ನು ನೀಡುವಂತೆ ವಿದ್ಯಾರ್ಥಿಗಳಿಗೆ ತಿಳಿಸಿದರು. ಮುಂದುವರೆದು, ಸದರಿ ಕಾರ್ಯಕ್ರಮಕ್ಕೆ ತಮ್ಮ ಶಾಲೆಯನ್ನು ಆಯ್ದುಕೊಂಡಿದ್ದಕ್ಕಾಗಿ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದ ಎಲ್ಲ ಸಿಬ್ಬಂದಿಗಳಿಗೆ ಧನ್ಯವಾದಗಳನ್ನು ತಿಳಿಸಿದರು.

ಮುಂದುವರೆದು, ಕಾರ್ಯಕ್ರಮದ ಅಂಗವಾಗಿ **ಶ್ರೀ ಆಸೀಫ ಬಾಗವಾನ,** ತಾಂತ್ರಿಕ ಸಹಾಯಕರು, ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಾಗಲಕೋಟೆ ರವರು ಕೆಲ ಪ್ರಾಯೋಗಿಕ ಪ್ರಾತ್ಯಕ್ಷಿಕೆಗಳ ಮೂಲಕ ಮೂಢನಂಬಿಕೆಗಳ ಹಿಂದಿನ ವಿಜ್ಞಾನಗಳ ಬಗ್ಗೆ ವಿದ್ಯಾರ್ಥಿಗಳಿಗೆ ಹಾಗೂ ಶಿಕ್ಷಕರಿಗೆ ತಿಳಿಸಿದರು.

ಅದರಂತೆ, ಸದರಿ ಕಾರ್ಯಕ್ರಮವನ್ನು **ಶ್ರೀಮತಿ ಮಹಾನಟಿದಾ ಕಳಸನ್ನವರ,** ಸಹ ಶಿಕ್ಷಕರು, ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ, ಹಿರೇಪಡಸಲಗಿ ಪ್ರಾರ್ಥನಾ ಗೀತೆಯ ಮೂಲಕ ಪ್ರಾರಂಭಿಸಿದರು ಹಾಗೂ **ಶ್ರೀ ಈರಣ್ಣ ಬುಳ್ಳಾ,** ಕ್ಯೂರೇಟರ್, ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಾಗಲಕೋಟೆ ರವರು ನಿರೂಪಿಸಿ ವಂದಿಸಿದರು.

**ಮುಂದುವರೆದು,** ಸದರಿ ಕಾರ್ಯಕ್ರಮದಲ್ಲಿ, **ಶ್ರೀ ವಿ.ಆರ್. ಸುನ್ನೊಳ್ಳಿ, ಮುಖ್ಯೋಪಾಧ್ಯಯರು,** ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ, ಹಿರೇಪಡಸಲಗಿ, **ಶ್ರೀ ಉಮೇಶ ತಳವಾರ,** ಸಹ ಶಿಕ್ಷಕರು, **ಶ್ರೀಮತಿ ಅಶ್ವಿನಿ ಗೌಡರ,** ಸಹ ಶಿಕ್ಷಕರು, **ಶ್ರೀಮತಿ ಭಾರತಿ ಪಾಟೀಲ,** ಸಹ ಶಿಕ್ಷಕರು, ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ, ಹಿರೇಪಡಸಲಗಿ, **ಶ್ರೀ ಗಂಗನಗೌಡ ಪಾಟೀಲ,** ದ್ವಿ.ದ.ಸಹಾಯಕರು, ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಾಗಲಕೋಟೆ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.




SRSC/BGK/01/01/2020-21


ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ
ಬಾಗಲಕೋಟೆ
ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ, ಹಿರೇಪಡಸಲಗಿ
"ವೈಜ್ಞಾನಿಕ ಚಿಂತನಾ ಕಾರ್ಯಕ್ರಮ"


SRSC/BGK/01/01/2020-21
















ವಿಜ್ಞಾನ ಕೇಂದ್ರ ಬಾಗಲಕೋಟೆ

*************